ದಿನಾಂಕಃ 15/09/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಪರ ವಕೀಲರಾದ ಶ್ರೀ ಹೆಚ್.ಎಸ್.ಎ. ವಕೀಲರಿಂದಃ

ನನ್ನ ತಂದೆ ಮೃತಪಟ್ಟು ಸುಮಾರು 50 ವರ್ಷ ಆಗಿದೆ. ನಮ್ಮ ಅಣ್ಣತಮ್ಮಂದಿರು, ನಾವುಗಳು 1975 ರಲ್ಲಿ ವಿಭಾಗ ಮಾಡಿಕೊಂಡಿರುತ್ತೇವೆ. ನಾನು ಸದರಿ ಪಾಲುಪಾರಿಕತ್ತು ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ ಐ.ಸಿ.ಆರ್.ಸಂ. 109/80-81 ರೀತ್ಯಾ ವಿಭಾಗ ಆಗಿರುತ್ತದೆ ಎಂದರೆ ಸರಿ. ಲಕ್ಕಪ್ಪಗೌಡರಿಗೆ ಸರ್ವೆ ನಂಬರ್ 4/5, 4/4, 75/1 ರಲ್ಲಿ ಜಮೀನು ಬಂದಿರುವುದಿಲ್ಲ. ಸರ್ವೆ ನಂಬರ್ 4/2 ರಲ್ಲಿ 8 ಗುಂಟೆ ಲಕ್ಕಪ್ಪಗೌಡರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಲಕ್ಕಪ್ಪಗೌಡರಿಗೆ ಸರ್ವೆ ನಂಬರ್ 62/1 ರಲ್ಲಿ 13 ಗುಂಟೆ, 62/2 ರಲ್ಲಿ 5 ಗುಂಟೆ, ಸರ್ವೆ ನಂಬರ್ 67/2 ಬಿ ರಲ್ಲಿ 5 ಗುಂಟೆ ಬಂದಿರುತ್ತದೆ. ಲಕ್ಕಪ್ಪಗೌಡರಿಗೆ ಒಟ್ಟಿಗೆ 49 ಗುಂಟೆ ಜಮೀನು ಬಂದಿರುತ್ತದೆ.

ನನಗೆ ಸರ್ವೆ ನಂಬರ್ 4/1 ರಲ್ಲಿ 21 ಗುಂಟೆ, 4/4 ರಲ್ಲಿ 3 ಗುಂಟೆ, 62/2 ರಲ್ಲಿ 25 ಗುಂಟೆ, 62/3 ರಲ್ಲಿ ನನಗೆ ಜಮೀನು ಬಂದಿರುವುದಿಲ್ಲ. 62/4 ರಲ್ಲಿ 12 ಗುಂಟೆ, 75/1 ರಲ್ಲಿ 8 ಗುಂಟೆ ಜಮೀನುಗಳು ಬಂದಿರುತ್ತದೆ. ಸರ್ವೆ ನಂಬರ್ 62/4 ಕ್ಕೆ ಸಂಬಂಧಿಸಿದಂತೆ ಪಹಣಿ ಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆ ರೀತಿ ಯಾವುದೇ ದಾಖಲೆಯನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಎಲ್ಲಾ ಸರ್ವೆ ನಂಬರ್ ಗಳಿಂದ 1 ಎಕರೆ 39 ಗುಂಟೆ ಬಂದಿರುತ್ತದೆ ಎಂದರೆ ಸರಿ.

ರಾಜು ನನಗೆ ತಮ್ಮನಾಗಬೇಕು. ನನ್ನ ತಮ್ಮ ರಾಜುವಿಗೆ ಸರ್ವೆ ನಂಬರ್ 4/4 ರಲ್ಲಿ 3 ಗುಂಟೆ, 62/2 ರಲ್ಲಿ 35 ಗುಂಟೆ, 75/1 ರಲ್ಲಿ 2 ಗುಂಟೆ, 81/7 ರಲ್ಲಿ 7 ಗುಂಟೆ ಬಂದಿರುತ್ತದೆ ಎಂದರೆ ಸರಿ. ರಾಜುವಿಗೆ ಒಟ್ಟು 1 ಎಕರೆ 13 ಗುಂಟೆ ಬಂದಿದೆ ಎಂದರೆ ಸರಿಯಲ್ಲ. ಶಿವನಂಜೇಗೌಡ ನನ್ನ ತಮ್ಮ. ಅವರಿಗೆ ಸರ್ವೆ ನಂಬರ್ 4/4 ರಲ್ಲಿ 3 ಗುಂಟೆ, 75/1 ರಲ್ಲಿ 8 ಗುಂಟೆ, 81/2 ರಲ್ಲಿ 11 ಗುಂಟೆ ಒಟ್ಟು 1 ಎಕರೆ 15 ಗುಂಟೆ ಬಂದಿರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಮ್ಯುಟೇಶನ್ ಅಂಶಗಳು ಸರಿ ಇಲ್ಲ ಎಂದು ನುಡಿಯುತ್ತಾರೆ.

ನಮ್ಮ ಕುಟುಂಬದ ವಿಭಾಗದ ಪ್ರಕಾರ ನನಗೆ ಎಲ್ಲಾ ಅಣ್ಣತಮ್ಮಂದಿರಗಿಂದ 20 ಗುಂಟೆ ಹೆಚ್ಚಾಗಿ ಬಂದಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಕುಟುಬಂದ ಜಮೀನುಗಳು ಪಿತ್ರಾರ್ಜಿತವಾಗಿದ್ದು, ಆ ಪ್ರಕಾರ ನಮ್ಮಗಳ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 62/1 ರಲ್ಲಿ ತೆವಲಡಹಳ್ಳಿ ಗ್ರಾಮದ ವಿಸ್ತೀರ್ಣ 12 ಗುಂಟೆಯಲ್ಲಿ ನಾನು ಸುಮಾರು 25 ವರ್ಷಗಳ ಮೇಲ್ಪಟ್ಟು ವ್ಯವಸಾಯ ಮಾಡಿಕೊಂಡು ಬರುತ್ತಿದ್ದೇನೆ ಎಂದರೆ ಸರಿ. ಸಿದ್ದೇಗೌಡ ಬಿನ್ ಜವರೇಗೌಡ ಯಾರುಎಂದು ನನಗೆ ಗೊತ್ತಿಲ್ಲ, ಆದರೆ ನಾನು ಜಮೀನಿನ ವ್ಯವಸಾಯವನ್ನು ಮಾಡುತ್ತಿದ್ದೇನೆ.

(ಮುಂದುವರೆದ ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು)

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಹೊಳೆನರಸೀಪುರ